# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

## ಸಿ.ಸಿ.**1915/2019**

ಸಾಕ್ಷಿದಾರರ ಹೇಳಿಕೆಃ

| | | |
|---|---|---|
| **ಹೆಸರು** | : ಚಂದ್ರಪ್ಪ | ಚಾಸಾಃ **1** ಪ್ರಾಸಾಃ **1** |
| **ತಂದೆಯ ಹೆಸರು** | : ಹನುಮಂತಪ್ಪ | |
| **ವಯಸ್ಸು** | : **63** ವರ್ಷ | |
| **ವೃತ್ತಿ** | : ವ್ಯವಸಾಯ | |
| **ವಾಸಸ್ಥಳ** | : ಅರಕೆರೆ ಕಾಲೋನಿ | |

ದಿನಾಂಕಃ **09-05-2025** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ :-ಮಾನ್ಯ ಸ.ಸ.ಅ. ರವರಿಂದಃ

ಆರೋಪಿ ನನಗೆ ಗೊತ್ತು. ಮೃತ ನಾಗರಾಜ ನನ್ನ ತಮ್ಮ. ಈಗ್ಗೆ ಸುಮಾರು 5 ವರ್ಷಗಳ ಹಿಂದೆ ನನ್ನ ತಮ್ಮ ನಾಗರಾಜ ಹೊನ್ನಾಳಿಯಿಂದ ಅರಕೆರೆ ಕಾಲೋನಿಗೆ ಸ್ಕೂಟಿಯಲ್ಲಿ ಬರುತ್ತಿದ್ದಾಗ ನರಸಗೊಂಡನಹಳ್ಳಿಯ ಬಸ್ ನಿಲ್ದಾಣದ ಬಳಿ ಹೊಳೆಸಿರಿಗೇರೆ ಗ್ರಾಮದ ಒಬ್ಬ ವ್ಯಕ್ತಿಯು ಒಂದು ಮೋಟಾರ್ ಸೈಕಲ್ ನಲ್ಲಿ ಹಿಂದುಗಡೆಯಿಂದ ಬಂದು ಡಿಕ್ಕಿಪಡಿಸಿದರು. ಸದರಿ ವಿಚಾರವನ್ನು ಚಾಸಾ-16 ರವರು ನನಗೆ ಖುದ್ದಾಗಿ ಅಪಘಾತದ ಬಗ್ಗೆ ತಿಳಿಸಿದರು. ನನ್ನ ತಮ್ಮನನ್ನು ಚಿಕಿತ್ಸೆಗಾಗಿ ಹೊನ್ನಾಳಿ ಸರ್ಕಾರಿ ಆಸ್ಪತ್ರೆಗೆ ಚಾಸಾ-13 ಮತ್ತು 14 ರವರು ಕರೆದುಕೊಂಡು ಬಂದಿದ್ದು ನಂತರ ಹೆಚ್ಚಿನ ಚಿಕಿತ್ಸೆಗಾಗಿ ಶಿವಮೊಗ್ಗದ ಸಹ್ಯಾದ್ರಿ ನಾರಾಯಣ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ನಂತರ ಹೆಚ್ಚಿನ ಚಿಕಿತ್ಸೆಗಾಗಿ ನನ್ನ ಮಗ ಮಂಜ ಮತ್ತು ಹಾಲಪ್ಪರವರು ಗಾಯಾಳು ನಾಗರಾಜನನ್ನು ಮಂಗಳೂರಿನ ಯಾನೆಪೋಯಾ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲು ಮಾಡಿದ್ದು ಸುಮಾರು 2 ತಿಂಗಳ ಕಾಲ ಚಿಕಿತ್ಸೆಯನ್ನು ಕೊಡಿಸಿ ಮನೆಗೆ ಕರೆದುಕೊಂಡು ಬಂದಿದ್ದು, ನಂತರ ಮನೆಯಲ್ಲಿ 1 ತಿಂಗಳ ಕಾಲ ಅಪಘಾತದಿಂದಾದ ಗಾಯಗಳಿಂದ ನರಳಿ ಮೃತಗೊಂಡಿರುತ್ತಾರೆ. ಈ ಬಗ್ಗೆ ನಾನು ಪೊಲೀಸರಿಗೆ

ದೂರನ್ನು ಕೊಟ್ಟಿರುತ್ತೇನೆ.

ದಿಃ 27-05-2019 ರಂದು ನೀಡಿದ ದೂರನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು, ದಿಃ 26-09-2019 ರಂದು ನೀಡಿದ ದೂರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು.

ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸ.ಸ.ಅ. ರವರು ಅನುಮತಿ ಕೋರಿದ್ದಾರೆ. ಸೂಕ್ತ ಕಾರಣ ನೀಡಿದ ಮೇರೆಗೆ ಅನುಮತಿ ನೀಡಲಾಗಿದೆ.

**<u>ಪಾಟೀ ಸವಾಲು:- ಮಾನ್ಯ ಸ.ಸ.ಅ. ರವರಿಂದ:-</u>**

ದಿಃ 26-05-2019 ರಂದು ಸಂಜೆ 07-05 ಗಂಟೆ ಸಮಯದಲ್ಲಿ ಚಾಸಾ-16 ರವರು ನನ್ನ ತಮ್ಮನಿಗೆ ಅಪಘಾತವಾದ ವಿಚಾರವನ್ನು ನನಗೆ ತಿಳಿಸಿರುತ್ತಾರೆ ಎಂದರೆ ಸರಿ. ನನ್ನ ತಮ್ಮ ನಾಗರಾಜನಿಗೆ ಎಡಕಣ್ಣಿಗೆ, ಎದೆಗೆ ಮತ್ತು ಇತರ ಕಡೆ ಪೆಟ್ಟುಬಿದ್ದು ರಕ್ತಗಾಯಗಳಾಗಿರುತ್ತವೆ ಎಂದರೆ ಸರಿ. ನನ್ನ ತಮ್ಮನ ಸ್ಕೂಟಿಗೆ ಡಿಕ್ಕಿಪಡಿಸಿದ ಬೈಕ್ ನ ಚಾಲಕನಿಗೆ ಮುಖಕ್ಕೆ ಪೆಟ್ಟು ಬಿದ್ದು ಗಾಯಗಳಾಗಿರುತ್ತವೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಬೈಕ್ ನ ಚಾಲಕ ಮತ್ತು ಅವನ ಹೆಂಡತಿ ಸ್ಥಳದಲ್ಲೇ ಇದ್ದರು ಎಂದರೆ ಸರಿ. ಚಾಸಾ-12 ರವರು ನನಗೆ 7 ಗಂಟೆ ಸಮಯದಲ್ಲಿ ನನ್ನ ತಮ್ಮ ಸ್ಕೂಟಿಯಲ್ಲಿ ಬರುತ್ತಿದ್ದಾಗ ಬೈಕಿನ ಚಾಲಕನು ಬೈಕ್ ಅನ್ನು ಅತೀ ವೇಗ ಮತ್ತು ಅಜಾಗರೂಕತೆಯಿಂದ ಹಿಂಬದಿಯಿಂದ ಚಾಲನೆ ಮಾಡಿಕೊಂಡು ಬಂದು ಅಪಘಾತ ಪಡಿಸಿರುತ್ತಾರೆ ಎಂದು ಮತ್ತು ಸದರಿ ಅಪಘಾತದಿಂದ ನನ್ನ ತಮ್ಮ ನಾಗರಾಜ ಬೈಕಿನಿಂದ ಕೆಳಗೆ ಬಿದ್ದಿರುತ್ತಾರೆ ಎಂದರೆ ಸರಿ. ಚಾಸಾ-12 ರವರು ಸದರಿ ಬೈಕಿನ ನಂ.ಕೆಎ-17/ಇವೈ-2153 ಎಂದು ತಿಳಿಸಿದರು ಎಂದರೆ ಸರಿ. ನನ್ನ ತಮ್ಮನನ್ನು ಆಟೋದಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದರಿಂದ ಬೈಕ್ ನ ಚಾಲಕನ ಹೆಸರು ತಿಳಿಸಿದುಕೊಳ್ಳಲು ನನಗೆ ಆಗಲಿಲ್ಲ ಎಂದರೆ ಸರಿ. ಕೆಎ-17/ಇವೈ-2153 ಮೋಟಾರ್ ಸೈಕಲ್ ನ ಚಾಲಕನ ಮೇಲೆ ಕಾನೂನು ರೀತಿಯ ಕ್ರಮವನ್ನು ತೆಗೆದುಕೊಳ್ಳಿ ಎಂದು ಪೊಲೀಸರಿಗೆ ದೂರನ್ನು ಕೊಟ್ಟಿದ್ದೇನೆ ಎಂದರೆ ಸರಿ.

ದಿಃ 28-05-2019 ರಂದು ನನ್ನ, ಚಾಸಾ-7 ಮತ್ತು 8 ರವರ ಸಮಕ್ಷಮ ಪೊಲೀಸರು ಬೆಳಗ್ಗೆ 10-30 ರಿಂದ 11-30 ಗಂಟೆ ಸಮಯದಲ್ಲಿ ಚಾಸಾ-8 ರವರು ತೋರಿಸಿದ ಮೇರೆಗೆ ಸ್ಥಳ ಮಹಜರ್ ಕ್ರಮ ಜರುಗಿಸಿ, ಕಚ್ಚ ನಕಾಶೆಯನ್ನು ತಯಾರಿಸಿ, 2 ಛಾಯಾಚಿತ್ರಗಳನ್ನು ತೆಗೆದಿದ್ದಾರೆ ಎಂದರೆ ಸರಿ.

ದಿಃ 25-09-2019 ರಂದು ಸಂಜೆ 04-30 ರಿಂದ 05-15 ಗಂಟೆ ಸಮಯದಲ್ಲಿ ನನ್ನ ಮತ್ತು ಚಾಸಾ-9 ಮತ್ತು 10 ರವರ ಸಮಕ್ಷಮ ನೀಲಿ ಬಣ್ಣದ ಸ್ಕೂಟಿ ಪೆಪ್ಟ್ ಅನ್ನು ಮತ್ತು ದಿಃ 29-05-2019 ರಂದು ಬೆಳಗ್ಗೆ 09-30 ರಿಂದ 10-30 ಗಂಟೆ ಸಮಯದಲ್ಲಿ ಚಾಸಾ-7 ಮತ್ತು 8 ರವರ ಸಮಕ್ಷಮ ಕೆಎ-17/ಇವೈ-2153 ಮೋಟಾರ್ ಸೈಕಲ್ ಅನ್ನು ಅಮಾನತ್ತು ಪಡಿಸಿಕೊಂಡು ಛಾಯಾಚಿತ್ರಗಳನ್ನು ತೆಗೆದಿರುತ್ತಾರೆ ಎಂದರೆ ಸರಿ.

ದಿಃ 25-09-2019 ರಂದು ರಾತ್ರಿ 08-45 ಗಂಟೆ ಸಮಯದಲ್ಲಿ ನಾಗರಾಜ್ ರವರು ಚಿಕಿತ್ಸೆ ಫಲಕಾರಿಯಾಗದೇ ಮೃತಪಟ್ಟಿರುತ್ತಾರೆ ಎಂದು ಮತ್ತು ದಿಃ 26-05-2019 ರಂದು ಸಂಜೆ 07-00 ಗಂಟೆ ಸಮಯದಲ್ಲಿ ಆದ ಅಪಘಾತದ ಗಾಯಗಳಿಂದ ಚೇತರಿಸಿಕೊಳ್ಳದೇ ಮೃತ ಪಟ್ಟಿರುತ್ತಾರೆ ಎಂದು ನಿಪಿ-2 ರಂತೆ ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ಈ ಬಗ್ಗೆ ನಾನು ಪೊಲೀಸರಿಗೆ ಮರುಹೇಳಿಕೆಯನ್ನು ಕೊಟ್ಟಿದ್ದೇನೆ ಎಂದರೆ ಸರಿ. ಅಪಘಾತ ದಿನದಂದು ಮೋಟಾರ್ ಸೈಕಲ್ ಅನ್ನು ಚಾಲನೆ ಮಾಡಿದ ವ್ಯಕ್ತಿಯ ಹೆಸರು ಕರಿಬಸಪ್ಪ ಮತ್ತು ಸದರಿ ವ್ಯಕ್ತಿ ಈ ದಿನ ನ್ಯಾಯಾಲಯದಲ್ಲಿ ಹಾಜರಿದ್ದಾರೆ ಎಂದರೆ ಸರಿ.

ಸ್ಥಳ ಮಹಜರ್ ಅನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು, ಕಚ್ಚಾ ನಕಾಶೆಯನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು, 2 ಛಾಯಾಚಿತ್ರಗಳನ್ನು ನಿಪಿ-5 ಮತ್ತು 6 ಎಂದು, ದಿಃ 25-09-2019 ರ ಅಮಾನತ್ತು ಮಹಜರ್ ಅನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು, ಸದರಿ ಸಮಯದಲ್ಲಿ ತೆಗೆದ 2 ಛಾಯಾಚಿತ್ರಗಳನ್ನು ನಿಪಿ-8 ಮತ್ತು 9 ಎಂದು, ದಿಃ 29-05-2019 ರ ಅಮಾನತ್ತು ಮಹಜರ್ ಅನ್ನು ನಿಪಿ-10 ಎಂದು, ಸಾಕ್ಷಿಯ ಸಹಿಯನ್ನು ನಿಪಿ-10(ಎ) ಎಂದು, ಸದರಿ ಸಮಯದಲ್ಲಿ ತೆಗೆದ 2 ಛಾಯಾಚಿತ್ರಗಳನ್ನು ನಿಪಿ-11 ಮತ್ತು 12 ಎಂದು, ಸಿ ಡಿ ಯನ್ನು ನಿಪಿ-13 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲು :- ಆರೋಪಿ ಪರ ವಕೀಲರಿಂದಃ</u>

ನಾನು ಅಪಘಾತವನ್ನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ನನ್ನ ತಮ್ಮ ಮೃತ ನಾಗರಾಜ

ಅಂಗವಿಕಲರು ಎಂದರೆ ಸರಿ. ಸ್ಥಳ ಮಹಜರ್ ಗೆ ಮತ್ತು ಅಮಾನತ್ತು ಮಹಜರ್ ಗೆ ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ದೂರಿನಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಅಪಘಾತವು ಆರೋಪಿಯ ತಪ್ಪಿನಿಂದ ಆಗದಿದ್ದರೂ ಸಹ ಸರ್ಕಾರದಿಂದ ಅಪಘಾತ ಪರಿಹಾರ ವಿಮೆಯನ್ನು ಪಡೆಯುವ ಉದ್ದೇಶದಿಂದ ಅಪಘಾತವು ಆರೋಪಿಯ ತಪ್ಪಿನಿಂದ ಆಗಿರುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ .

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.